Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 12/2025

ಪ್ರಾ.ಸಾ. 7 ಚಾ.ಸಾ 12

| | | |
|---|---|---|
| ಹೆಸರು | : | ಭೀಮಾಶಂಕರ |
| ತಂದೆಯ ಹೆಸರು | : | ಆಶಪ್ಪ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಕಾಕಲವಾರ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 11-02-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-1 ಮತ್ತು 13 ರವರ ಪರಿಚಯ ಇರುತ್ತದೆ. ದಿಃ 09.10.2024 ರಂದು ನನ್ನನ್ನು ಮತ್ತು ಚಾಸಾ-13 ರವರನ್ನು ಸದಾಶಿವರೆಡ್ಡಿ ರವರ ಹಳೆಯ ಮನೆಯ ಹತ್ತಿರ ಬೆಳಿಗ್ಗೆ 7.30-8.30 ರವರೆಗೆ ನಮ್ಮನ್ನು ಕರೆಯಿಸಿ, ನಮ್ಮ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ನಮ್ಮ ಜೊತೆ ಚಾಸಾ-1 ಮತ್ತು ಪೊಲೀಸರು ಇದ್ದರು. ನರೇಂದ್ರ ಎನ್ನುವ ಬಾಲಕನ ಕೊಲೆ ಆಗಿದೆ ಎಂದು ಸ್ಥಳ ತೋರಿಸಿದ್ದು ಅಲ್ಲಿ ಪೊಲೀಸರು ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.21 ಎಂದು ಗುರುತಿಸಲಾಗಿದೆ ಸಾಕ್ಷಿದಾರರ ಸಹಿಯನ್ನು **ನಿ.ಪಿ.21(ಎ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಕರಡು ನಕಾಶೆಯನ್ನು ತಯಾರಿಸಿರುತ್ತಾರೆ ಅದನ್ನು ಈಗಾಗಲೇ ನಿ.ಪಿ.22 ಎಂದು ಗುರುತಿಸಲಾಗಿದೆ. ಸಾಕ್ಷಿದಾರರ ಸಹಿಯನ್ನು **ನಿ.ಪಿ.22(ಎ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಟ್ಟು 8 ತೆಗೆದ ಭಾವಚಿತ್ರಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿ.ಪಿ.23 ರಿಂದ 30 ಎಂದು ಗುರುತಿಸಲಾಗಿದೆ.

ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ

2. ಚಾಸಾ-1 ಮತ್ತು 13 ಇವರು ನನಗೆ ಸಂಬಂಧಿಕರು ಆಗಿರುವುದಿಲ್ಲ ಆದರೆ ನಮ್ಮ ಊರಿನವರು ಆಗಿರುತ್ತಾರೆ. ಚಾಸಾ-1 ಮತ್ತು 13 ಇವರು ನಮ್ಮ ಜಾತಿಯವರು ಆಗಿರುತ್ತಾರೆ. ನಿ.ಪಿ.21 ರಲ್ಲಿ ಭಾವಚಿತ್ರಗಳನ್ನು ತೆಗೆದ ಬಗ್ಗೆ ಬರೆದಿರುವುದಿಲ್ಲ ಎಂದರೆ ಸಾಕ್ಷಿದಾರರು ಪೊಲೀಸರು ಆ ದಿನ ಭಾವಚಿತ್ರ ತೆಗೆದ ಬಗ್ಗೆ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ.21 ರಲ್ಲಿ ಭಾವಚಿತ್ರಗಳನ್ನು ತೆಗೆದ ಬಗ್ಗೆ ಬರೆದಿರುವುದಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.21 ರಲ್ಲಿ ಭಾವಚಿತ್ರಗಳನ್ನುಯಾರು ತೆಗೆದಿರುತ್ತಾರೆ ಎಂದು ಎನ್ನುವುದಕ್ಕೆ ಸಾ8ಿದಾರರು ನನಗೆ ಗೊತ್ತಿಲ್ಲ ಎಂದು ನುಡಿಯುತ್್ಾರೆ. ನಿ.ಪಿ.21 ರಲ್ಲಿ ಮನೆ ನಂಬರ ಬರೆದಿರುವುದಿಲ್ಲ ಎನ್ನುವುದಕ್ಕೆ ಸಾಕ್ಷಿದಾರರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಮನೆಯಿಂದ ಸದಾಶಿವರೆಡ್ಡಿಯವರ ಮನೆ ದೂರು ಇರುತ್ತದೆ. ನಿ.ಪಿ.21 ನ್ನು ಮಾಡುವ ಕಾಲಕ್ಕೆ ದನಗಳು ಇದ್ದಿರಲಿಲ್ಲ. ದಿಃ 09.10.2024 ರಂದು ತೋರಿಸಲು ನನ್ನನ್ನು ಬೆಳಿಗ್ಗೆ 7.30-8.30 ಗಂಟೆಯವರೆಗೆ ಪಂಚನಾಮೆಗೆ ಕರೆದರು ಎಂದರೆ ಸರಿಯಲ್ಲ. ಸದಾಶಿವರೆಡ್ಡಿ ಯವರ ಮನೆಯ ಹತ್ತಿರ ಕರೆಯಿಸಿದ್ದರು ಅಲ್ಲಿ ಚಾಸಾ-1 ರವರು ಇಲ್ಲಿಯೇ ಕೊಲೆ ಮಾಡಿರುತ್ತಾನೆ ಎಂದು ಜಾಗ ತೋರಿಸಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.21 ರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.22 ಮತ್ತು ನಿ.ಪಿ.23 ರಿಂದ 30 ಯಾರು ತೆಗೆದರು ಮತ್ತು ಯಾವ ಕಾರಣಕ್ಕಾಗಿ ತೆಗೆದರು ಎಂದು ನನಗೆ ಗೊತ್ತಿರವುದಿಲ್ಲ ಎಂದರೆ ಸಾಕ್ಷಿದಾರರು ಪಂಚನಾಮೆ ಮಾಡಿದಕ್ಕಾಗಿ ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಭಾವಚಿತ್ರಗಳನ್ನು ಯಾರು ತೆಗೆದಿರುತ್ತಾರೆ ಎಂದರೆ ಪೊಲೀಸರು ತೆಗೆದಿರುತ್ತಾರೆ ಆದರೆ ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ-ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.